# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1452+1453** |
| ಸದಸ್ಯರ ಹೆಸರು | : | **ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸಬೇಕಾದ ದಿನಾಂಕ | : | **19-03-2020** |
| ಉತ್ತರಿಸುವ ಸಚಿವರು | : | **ಮುಖ್ಯಮಂತ್ರಿಗಳು** |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮಂಡಳಿಯು 2019ರ ಫೆಬ್ರವರಿ 20 ರಂದು ಖಾಲಿಯಿದ್ದ AEE, AE, JE, JPA, JA ಸೇರಿದಂತೆ ಒಟ್ಟು 3,646 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ಒಂದು ವರ್ಷ ಕಳೆದರೂ ನೇಮಕಾತಿ ಪ್ರಕ್ರಿಯೆ ಇನ್ನೂ ಪ್ರಾರಂಭಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಕೈಗೊಂಡ ಕ್ರಮಗಳೇನು; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಸ್ಕಾಂಗಳಲ್ಲಿ ಖಾಲಿ ಇದ್ದ ವಿವಿಧ ಪದವೃಂದದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಇಂಜಿನಿಯರ್(ವಿ/ಸಿವಿಲ್), ಕಿರಿಯ ಇಂಜಿನಿಯರ್(ವಿ/ಸಿವಿಲ್), ಕಿರಿಯ ಆಪ್ತ ಸಹಾಯಕ, ಕಿರಿಯ ಸಹಾಯಕ, ಚಾಲಕ ದರ್ಜೆ-2, ಕಿರಿಯ ಪವರ್‌ಮ್ಯಾನ್ ಮತ್ತು ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 20-02-2019 ರಂದು ಸಂಕ್ಷಿಪ್ತ ಉದ್ಯೋಗ ಪ್ರಕಟಣೆಯನ್ನು ಮತ್ತು ದಿನಾಂಕ: 25-02-2019 ರಂದು ವಿಸ್ತೃತ ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಸಹಾಯಕ ಇಂಜಿನಿಯರ್(ವಿ/ಸಿವಿಲ್), ಕಿರಿಯ ಇಂಜಿನಿಯರ್ (ವಿ/ಸಿವಿಲ್), ಕಿರಿಯ ಸಹಾಯಕ ಹುದ್ದೆಗಳ ಆಯ್ಕೆಗೆ ಆನ್-ಲೈನ್ ಆಪ್ಟಿಟ್ಯೂಡ್ ಪರೀಕ್ಷೆ ನಡೆಸುವ ವಿಷಯದಲ್ಲಿ ನಿಗಮದ ವತಿಯಿಂದ ಕ್ರಮವಹಿಸಲಾಗುತ್ತಿದೆ. |
| ಆ) | ಇಷ್ಟೊಂದು ವಿಳಂಬ ನೀತಿಯನ್ನು ಅನುಸರಿಸಲು ಕಾರಣವೇನು; | ವಿಳಂಬ ಆಗಲಿಕ್ಕೆ ಈ ಕೆಳಗಿನ ಕಾರಣಗಳು ಇರುತ್ತದೆ:-<br>1. ಏಪ್ರಿಲ್-2019 ಮತ್ತು ಮೇ-2019 ರ ಅವಧಿಯಲ್ಲಿ ನಡೆದ ಲೋಕಸಭಾ ಚುನಾವಣೆ.<br>2. ದಿನಾಂಕ: 12.11.2019 ರಂದು ನಡೆದ 118 ನೇ ಮಂಡಳಿ ಸಭೆಯಲ್ಲಿ ನೌಕರಿ ಭರ್ತಿ ಮತ್ತು ಬಡ್ತಿ ನಿಯಮಾವಳಿಯ ನೇರ ನೇಮಕಾತಿ ಮತ್ತು ಬಡ್ತಿ ಕೋಟಾವನ್ನು ನೇರ ನೇಮಕಾತಿಗೆ ಶೇ.10 ಮತ್ತು ಬಡ್ತಿಗೆ ಶೇ.90 ಕ್ಕೆ ತಿದ್ದುಪಡಿ ಮಾಡಿದ್ದರಿಂದ, ನೇರ ನೇಮಕಾತಿ ಮೂಲಕ ತುಂಬಬೇಕಾಗಿರುವ ಖಾಲಿ ಹುದ್ದೆಗಳ ಸಂಖ್ಯೆಯಲ್ಲಿ ವ್ಯತ್ಯಾಸ ಬರುವ ಸಾಧ್ಯತೆ ಇರುತ್ತದೆ. ಇದರಿಂದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಗೆ ಕರೆಯಲಾಗಿದ್ದ ಉದ್ಯೋಗ ಪ್ರಕಟಣೆಯನ್ನು ದಿನಾಂಕ: 06.01.2020 ರಂದು ಈಗಾಗಲೇ ಹಿಂಪಡೆಯಲಾಗಿದೆ.<br>3. ಏತನ್ಮಧ್ಯೆ, ಶ್ರೀಮತಿ.ಮಂಜುಳ ಮತ್ತು ಇತರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಿನಾಂಕ: 06.03.2019 ರಂದು ರಿಟ್ ಅರ್ಜಿ ಸಂಖ್ಯೆ: 10742-10864/2019 ನ್ನು ದಿನಾಂಕ: 25.02.2019 ರ ಉದ್ಯೋಗ ಪ್ರಕಟಣೆಯ ವಿರುದ್ಧ ಸಲ್ಲಿಸಿದ್ದರು. ಮಾನ್ಯ ನ್ಯಾಯಾಲಯವು ವಿಚಾರಣೆ ನಡೆಸಿ, ದಿನಾಂಕ: 20.01.2020 ರಲ್ಲಿ ರಿಟ್ ಅರ್ಜಿಯನ್ನು ವಜಾ ಮಾಡಿ ಅಂತಿಮ ಆದೇಶವನ್ನು ಹೊರಡಿಸಿರುತ್ತದೆ. |

....2

| | | |
|---|---|---|
| | | 4. 2014 ರ ನಂತರ ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳಲ್ಲಿ 'ಎ' ಮತ್ತು 'ಬಿ' ಪದವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇಮಕಾತಿಯನ್ನು ಮಾಡಲಾಗಿದ್ದರಿಂದ, ಎಲ್ಲಾ ಎಸ್ಕಾಂಗಳಲ್ಲಿ ಮತ್ತು ಕವಿಪ್ರನಿನಿಯಲ್ಲಿ ಒಂದೇ ಪದವೃಂದಕ್ಕೆ ಎರಡೆರಡು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವುದರಿಂದ ಮುಂದಿನ ಪದವೃಂದಕ್ಕೆ ಪದೋನ್ನತಿಯನ್ನು ನೀಡಲು ಅಸ್ಪಷ್ಟತೆ ಇರುತ್ತದೆ. ಜೇಷ್ಠತಾ ಪಟ್ಟಿ ಪ್ರತ್ಯೇಕ ಇರುವುದರಿಂದ, ಎಸ್ಕಾಂಗಳಲ್ಲಿ ನೇಮಕವಾದ ಇಂಜಿನಿಯರ್ ಗಳು ಬೇಗ ಪದೋನ್ನತಿಯನ್ನು ಪಡೆಯುವ ಸಾಧ್ಯತೆ ಹಾಗೂ ಕವಿಪ್ರನಿನಿಯಲ್ಲಿ ದೀರ್ಘ ಸಮಯ ಹಿಡಿಯುವ ಸಾಧ್ಯತೆ ಇರುತ್ತದೆ. ಈ ಹಿನ್ನಲೆಯಲ್ಲಿ ಸ್ಪಷ್ಟ ನಿರ್ಧಾರ ಕೈಗೊಂಡು ನೇಮಕಾತಿ ಹಾಗೂ ಮುಂಬಡ್ತಿ ವಿಷಯವನ್ನು ಪರಿಶೀಲಿಸಬೇಕಾಗುತ್ತದೆ.<br><br>5. ಇದಲ್ಲದೇ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉಂಟಾಗಿದ್ದ ನೆರೆ ಹಾವಳಿಯಿಂದಾಗಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು Power Restoration ಕಾರ್ಯದಲ್ಲಿ ನಿರತರಾಗಿದ್ದರಿಂದ ಸುಮಾರು 2-3 ತಿಂಗಳು ನೇಮಕಾತಿ ಪ್ರಕ್ರಿಯೆ ವಿಳಂಬವಾಗಿರುತ್ತದ.<br><br>6. ಮುಂದುವರೆದು, ಪ್ರಶ್ನೆ ಪತ್ರಿಕೆ ತಯಾರಿಸುವ ಸಂಸ್ಥೆಯು ಕೊರೋನಾ ವೈರಸ್ ಭೀತಿಯಿಂದ ಪ್ರಶ್ನೆ ಪತ್ರಿಕೆಗಳನ್ನು ಸಲ್ಲಿಸಲು ಕಾಲಾವಕಾಶದ ಅಗತ್ಯವಿದೆಯೆಂದು ತಿಳಿಸಿರುತ್ತಾರೆ. ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಕಾಯ್ದೆಯಿಂದ ವಿನಾಯಿತಿ ಪಡೆಯಲಾಗಿರುತ್ತದೆ.<br><br>7. ಆನ್-ಲೈನ್ ಆಪ್ಟಿಟ್ಯೂಡ್ ಪರೀಕ್ಷೆ ನಡೆಸಲು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಂಪ್ಯೂಟರ್ ಲ್ಯಾಬ್ ಗಳ ಅವಶ್ಯಕತೆ ಇರುತ್ತದೆ. ಸುಮಾರು 22,000 ಆನ್-ಲೈನ್ ಸೌಲಭ್ಯವಿರುವ ಕಂಪ್ಯೂಟರ್ ಗಳ ಅವಶ್ಯಕತೆ ಇರುವ ಕಾಲೇಜುಗಳಲ್ಲಿ ತರಗತಿ ಪರೀಕ್ಷೆಗಳು ನಡೆಯುತ್ತಿದ್ದುದರಿಂದ ಪರೀಕ್ಷಾ ಕೇಂದ್ರಗಳ ಅಲಭ್ಯತೆಯಿಂದಾಗಿ ಸಹ ವಿಳಂಬವಾಗಿರುತ್ತದೆ. ಹಾಗಾಗಿ ಕಾಲೇಜುಗಳಿಗೆ ರಜೆ ಇದ್ದಾಗ ಪರೀಕ್ಷೆಯನ್ನು ನಡೆಸಬೇಕಾಗಿರುತ್ತದೆ.<br><br>ಈ ಮೇಲ್ಕಂಡ ಎಲ್ಲಾ ಕಾರಣಗಳಿಂದ ನೇಮಕಾತಿ ಪ್ರಕ್ರಿಯೆಯು ವಿಳಂಬವಾಗಿರುತ್ತದೆ. |
| ಇ) | ಈ ಮೇಲ್ಕಂಡ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು ಯಾವಾಗ? | ಸಹಾಯಕ ಇಂಜಿನಿಯರ್(ವಿ/ಸಿವಿಲ್), ಕಿರಿಯ ಇಂಜಿನಿಯರ್(ವಿ/ಸಿವಿಲ್), ಕಿರಿಯ ಸಹಾಯಕ ಹುದ್ದೆಗಳಿಗೆ ಆನ್-ಲೈನ್ ಆಪ್ಟಿಟ್ಯೂಡ್ ಪರೀಕ್ಷೆಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಎನರ್ಜಿ 76 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ